ಕೇಳಿಸಿಲ್ಲ ಎಂಬಂತೆ ವರ್ತಿಸುತ್ತಿದ್ದ. ಸಿಮೆಂಟ್ ಶೀಟಿನ ಮನೆ ಕಟ್ಟಿಕೊಳ್ಳುವ ತನ್ನ ಆಸೆ ಈಡೇರಿಕೆಗಾಗಿ ಚಿತ್ತಪ್ಪ ತನ್ನಂತೆ ದುಡಿಮೆ ಮಾಡಲು ಕೂಲಿನಾಲಿಗೆ ಹೋಗದೇ, ಸದಾ ರಾಮಪುರ ಹೋಟಲ್‌ನಲ್ಲಿ ಹರಟೆ ಹೊಡೆಯುವಲ್ಲಿ ವ್ಯಥಾ ಕಾಲಹರಣ ಮಾಡುತ್ತಾ, ತನ್ನ ಮಾತಿಗೆ ಅಸಡ್ಡೆ ತೋರುತ್ತಿದ್ದದನ್ನು ಕಂಡು ತನ್ನ ಗಂಡನನ್ನು ಬೈಯುವುದನ್ನೇ ದ್ಯಾವಕ್ಕ ತನ್ನ ಮೊದಲ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಳು ಎಂಬುದು ಹಟ್ಟಿಗೆಲ್ಲಾ ಗೊತ್ತಿತ್ತು.

ದ್ಯಾವಕ್ಕ ಕೂಲಿಗೆ ಹೋದ ಸ್ಥಳದಲ್ಲಿ ಅವರಿವರ ಬಾಯಿಯಿಂದ ಕೇಳಿ ತಿಳಿದುಕೊಂಡಂತೆ, ಗೌರ್ಮೆಂಟೋರು ಮನೆ ಕಟ್ಟಲಿಕ್ಕೆ ಕಬ್ಬಿಣದ ಕಿಟಕಿ, ಬಾಗಿಲು ಕೊಟ್ಟು ಮೇಲಿಂದಿಷ್ಟು ಹಣವನ್ನೂ ಕೊಡ್ತಾರಂತೆ ಎಂಬ ಸುದ್ದಿಯೇನೋ ತಿಳಿದಿತ್ತು, ಆದರೆ ನಮ್ಮಂಥವರಿಗೆ ಕೊಡ್ತೋರ್‍ಯಾರು? ಅದರಂತೆ ಯಾವಾಗಾದರೊಮ್ಮೆ ರಾಮಪುರಕ್ಕೆ ಹೋದಾಗ ತನ್ನೊಡನೆ ಕೂಲಿ ಮಾಡಲು ಬರುವ ಸರೀಕರ ಮನೆಯ ಓಣಿಯಲ್ಲಿ ಗೌರ್ಮೆಂಟ್ ಮನೆ ಕಟ್ಟಿಕೊಂಡವರನ್ನ ಆಸೆಗಣ್ಣಿನಿಂದ ನೋಡಿ ಬರುತ್ತಿದ್ದಳು. ಗೌರ್ಮೆಂಟೋರು ವರ್ಷಕ್ಕೆ ಇಂತಿಷ್ಟು ಮನೆ ಕೊಡುವಾಗ್ಗೆ ತನ್ನ ಹಟ್ಟಿಗೂ ಒಂದೆರಡು ಮನೆ ಕೊಡುವುದಾಗಿ ತನ್ನ ಹಟ್ಟಿಯಲ್ಲಿ ಬಿಳಿ ಲುಂಗಿ ತೊಟ್ಟು, ದಿನಾಲೂ ಹಟ್ಟಿಗೂ ರಾಮಪುರಕ್ಕೂ ಎಡತಾಕುತ್ತಾ ಇರುತ್ತಿದ್ದ ಚಿಕ್ಕಣ್ಣ ಎಂಬ ಮರಿ ಪುಢಾರಿ ಹೇಳುತ್ತಿದ್ದ ಮಾತನ್ನು ಕೇಳಿ ಕೇಳಿ ಸಾಕಾಗಿತ್ತು. ಒಂದಿನ 'ಈಟು ವರ್ಷದಿಂದ ನಿನ್ನ ಮಾತು ಕೇಳ್ತಿದೀನಿ, ಒಂದೇ ಒಂದು ಶೀಟಿನ ಮನೇನೂ ನಮ್ಮ ಹಟ್ಟಿ ಜನಕ್ಕೆ ಕಟ್ಟಿಕೊಟ್ಟಿದ್ದನ್ನ ಕಾಣೆ! ಅದೇನು ಕಿಸಿತೀರೋ ನೀವು ಪಂಚಾತಿನಲ್ಲಿ' ಎಂದು ಜಾಡಿಸಿದ್ದಳು. ಹೇಗಾದರೂ ಸರಿ ಈ ಸಲವಾದರೂ ಗೌರ್ಮೆಂಟ್ ಮನೆ ತಗೋಬೇಕು ಎಂದು ದ್ಯಾವಕ್ಕ ಪಣ ತೊಟ್ಟವಳಂತೆ ಪಂಚಾಯಿತಿ ಕಚೇರಿಗೆ ಅಲೆದಳು. 'ಇನ್ನೂನು ಮನೆ ಬಂದಿಲ್ಲ. ಮನೆಗಳು ಬಂದಾಗ ನಾವೇ ಡಂಗೂರ ಒಡೆದು ಗ್ರಾಮಸಭೆ ಮಾಡ್ತೀವಿ. ಆವಾಗ ಬಂದು ಕೇಳು' ಎಂದು ಅಲ್ಲಿನ ಅಧಿಕಾರಿಗಳು ಅವಳು ಹೋದಾಗಲೆಲ್ಲ ಹೀಗೆಯೇ ಹೇಳಿ ಕಳುಹಿಸುತ್ತಿದ್ದರು.

ದ್ಯಾವಕ್ಕನಿಗೆ ಸಮಾಧಾನವಾಗಲಿಲ್ಲ, ಊರಿನಲ್ಲಿ ತಿಳಿದೋರ್‍ನೆಲ್ಲಾ ಕೇಳಲಿಕ್ಕೆ ಶುರುಮಾಡಿದಳು. ಕೆಲವರು 'ದ್ಯಾವಕ್ಕ, ಗೌರ್ಮೆಂಟ್ ಮನೆ ಅಷ್ಟು ಸುಲಭವಾಗಿ ಬರಲ್ಲ. ಮನೆ ಆಸೆ ಬಿಟ್ಟು ಬಿಡು. ಈಗ ಇರೋ ಗುಡಿಸಲನ್ನೇ ಭದ್ರಮಾಡಿಕೋ ಹೋಗು' ಎಂದು ಹೇಳಿ ಅವಳ ಆಸೆಗೆ ತಣ್ಣೀರು ಎರಚುತ್ತಿದ್ದರು. ಮತ್ತೂ ಕೆಲವರು, 'ಸರ್ಕಾರಿ ಮನೆಗಳನ್ನು ಕೆಟಗರಿವಾರು ಕೊಡ್ತಾರೆ. ನಿಮ್ಮ ಕೆಟಗರಿಗೆ ಈ ಸಾರಿ ಬರಬೇಕಲ್ಲ! ಬಂದ್ರೂ ಪಂಚಾಯ್ತಿ ಸದಸ್ಯರು ಅವರವರ ಬಂಧುಗಳಿಗೆ, ಲಂಚ ಕೊಟ್ಟವರಿಗೆ ಕೊಡ್ತಾರೆ. ನಿನಗೆಲ್ಲಿ ಕೊಡ್ತಾರೆ ಹೋಗವ್ವೊ...' ಎಂದು ಹಳ್ಳಿಗಳ ವಾಸ್ತವವವನ್ನು ತಿಳಿಸಿ ಹೇಳುತ್ತಿದ್ದರು.

ದಿನವೂ ಇದನ್ನೆಲ್ಲ ಕೇಳುತ್ತಿದ್ದ ದ್ಯಾವಕ್ಕ, ಗೌರ್ಮೆಂಟ್ ಮನೆ ಪಡೆಯುವ ಆಸೆಯನ್ನು ಅನಾಮತ್ತಾಗಿ ತೊರೆಯಲಾರದೆ ಆಸೆಗಣ್ಣಿನಿಂದ ಇದ್ದಳು. ಅವಳ ಮನಸ್ಸಿನ ಒಂದು ಮೂಲೆಯಲ್ಲಿ 'ಹೇಗಾದ್ರು ಸರಿ ಗೌರ್ಮೆಂಟ್ ಮನೆ ಬಂದ್ರೆ ನಾನು ಕೂಲಿ ಪಾಲಿ ಮಾಡಿ ಕೂಡಿಟ್ಟ ಹಣ ಮತ್ತು ಒಂದಿಷ್ಟು ಸಾಲಸೋಲ ಮಾಡಿ ಇಟ್ಟಿಗೆಯಿಂದ ಗೋಡೆಕಟ್ಟಿ, ಸಿಮೆಂಟ್ ಶೀಟಿನ ಮನೆ ಕಟ್ಟಿಕೊಳ್ಳಲೇಬೇಕು. ಈ ಹಾಳಾದ ಹುಲ್ಲು ಗುಡಿಸಲಲ್ಲಿ ದೂಳು ರವುದೆ ಬೀಳ್ತದೆ. ಸ್ವಲ್ಪ ಮಳೆ ಬಂದ್ರೂ ಸೋರುತ್ತದೆ. ಗೌರ್ಮೆಂಟ್‌ನೋರು ಒಂದಿಷ್ಟು ದುಡ್ಡು ಕೊಟ್ರೆ ಅನೂಕೂಲವಾಗ್ತದೆ' ಎಂಬ ತನ್ನೊಳಗಿನ ಬೆಟ್ಟದಷ್ಟು ಆಸೆಯನ್ನು ನೆನೆಯುತ್ತಾ ಕೂಲಿಗೆ ಹೋಗುತ್ತಿದ್ದಳು.

ಗೋಶಾಲೆಯಲ್ಲಿ ನೀಡಿದ ಒಂದೇ ತರಹದ ಮೆಕ್ಕೆಜೋಳದ ದಂಟು ತಿಂದು ದನಗಳಿಗೆ ಗಂಟಲುಬೇನೆ ಬಂದು ನರಳಲಿಕ್ಕೆ ಶುರುಮಾಡಿದವು. ದ್ಯಾವಕ್ಕನ ಎಮ್ಮೆ ಈ ರೀತಿಯ ರೋಗಕ್ಕೆ ತುತ್ತಾಗಿ ನರಳಿತು. ಚಿಕಿತ್ಸೆಗಾಗಿ ದನದ ಆಸ್ಪತ್ರೆಗೆ ಎಡತಾಕಿ ಚಿಕಿತ್ಸೆ ಕೊಡಿಸಿದರೂ ಚೇತರಿಸಿಕೊಳ್ಳದೇ ಒಂದು ದಿನ ದೇವರ ಪಾದ ಸೇರಿತು. ಆಕೆ ಊರ ಮುಂದೆ ದೊಡ್ಡ ಬಾಯಿ ಮಾಡಿ ಬಡಬಡಿಸುತ್ತಾ ಕಣ್ಣೀರಾಗಿದ್ದಳು. ಇದು ದ್ಯಾವಕ್ಕನ ಎಮ್ಮೆಗೆ ಮಾತ್ರ ಒದಗಿದ ಸ್ಥಿತಿಯಾಗಿರದೇ, ಆ ಭಾಗದ ಹಲವಾರು ದನಕರಗಳಿಗೂ ಇದೇ ಸ್ಥಿತಿ ಒದಗಿತ್ತು. ಆ ಕಾಯಿಲೆಗೆ ಚಿಕಿತ್ಸೆ ಮಾಡಿಸಲಿಕ್ಕಾಗದೆ ಜನ ರೋಸಿಹೋಗಿದ್ದರು. ತಮಗಿದ್ದ ಒಂದೊಂದೆ ದನ-ಕರಗಳನ್ನು ಕಳೆದುಕೊಂಡಿದ್ದ ಜನ ಒಂದು ದಿನ ರೊಚ್ಚಿಗೆದ್ದು ತಾಲ್ಲೂಕು ಆಫೀಸ್‌ನ ಮುಂದೆ ಧರಣಿಯನ್ನೂ ಮಾಡಿದರು. ಆದರೂ ಅವರಿಗೆ